**National**
**Kannada**
**30.11.2025 1.10 pm**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಆಹಾರ ಧಾನ್ಯ ಉತ್ಪಾದನೆಯಲ್ಲಿ ಭಾರತ ಮಹತ್ವದ ಮೈಲಿಗಲ್ಲು- ಮನ್ ಕಿ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅಭಿಮತ

೨. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಗ್ರಾಮಜನ್ಯ- ತುಮಕೂರಿನ ಶಿವಗಂಗಾ ಕಾಲಂಜಿಯಾ ಜೇನುತುಪ್ಪದ ಬಗ್ಗೆ ಪ್ರಧಾನಿ ಶ್ಲಾಘನೆ

೩. ಸಂಸತ್ ಚಳಿಗಾಲದ ಅಧಿವೇಶನ ನಾಳೆಯಿಂದ ಆರಂಭ: ಸರ್ವಪಕ್ಷ ಸಭೆ ಪ್ರಗತಿಯಲ್ಲಿ

೪. ಏಕದಿನ ಕ್ರಿಕೆಟ್ ಸರಣಿ; ರಾಂಚಿಯಲ್ಲಿಂದು ಭಾರತ-ದಕ್ಷಿಣ ಆಫ್ರಿಕಾ ಮುಖಾಮುಖಿ

***************

ಕೃಷಿ ವಲಯದಲ್ಲಿ ಭಾರತವು, ಮಹತ್ವದ ಸಾಧನೆ ಮೆರೆದಿದೆ. ದೇಶವು, ೩೫೭ ದಶಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆಯೊಂದಿಗೆ ಐತಿಹಾಸಿಕ ದಾಖಲೆಯನ್ನು ಸೃಷ್ಟಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹರ್ಷ ವ್ಯಕ್ತಪಡಿಸಿದ್ದಾರೆ. 'ಮನ್ ಕಿ ಬಾತ್'ನ ೧೨೮ನೇ ಆವೃತ್ತಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ, ದೇಶ-ವಿದೇಶಗಳಲ್ಲಿ ನೆಲೆಸಿರುವ ಭಾರತೀಯರನ್ನುದ್ದೇಶಿ ಮಾತನಾಡಿದರು. ಭಾರತದಲ್ಲಿ ಹತ್ತು ವರ್ಷಗಳ ಹಿಂದೆ ೩೫೭ ಮಿಲಿಯನ್ ಟನ್‌ಗಳಿಷ್ಟಿದ್ದ ಆಹಾರ ಧಾನ್ಯ ಉತ್ಪಾದನೆ ಪ್ರಸಕ್ತ ವರ್ಷದಲ್ಲಿ ೧೦೦ ದಶಲಕ್ಷ ಟನ್‌ಗಳಷ್ಟು ಹೆಚ್ಚಾಗಿದ್ದು, ಇದು ಭಾರತದ ಆಹಾರ ಧಾನ್ಯ ಸ್ವಾವಲಂಬನೆಗೆ ಪ್ರಮುಖ ಮೈಲಿಗಲ್ಲಾಗಿದೆ ಎಂದು ಹೇಳಿದರು.

ನಂತರ ಪ್ರಧಾನಿ, ಸಂವಿಧಾನ ದಿನದ ಕುರಿತು ಪ್ರಸ್ತಾಪಿಸಿ, ನವೆಂಬರ್ ೨೬, 'ಸಂವಿಧಾನ ದಿನದಂದು ವಂದೇ ಮಾತರಂನ ೧೫೦ನೇ ವಾರ್ಷಿಕೋತ್ಸವದ ನಿಮಿತ್ತ ರಾಷ್ಟ್ರವ್ಯಾಪಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ನವೆಂಬರ್ ೨೫ ರಂದು, ಅಯೋಧ್ಯೆಯ ರಾಮ ಮಂದಿರದಲ್ಲಿ ಧರ್ಮಧ್ವಜವನ್ನು ಹಾರಿಸಲಾಯಿತು. ಅದೇ ದಿನ, ಕುರುಕ್ಷೇತ್ರದ ಜ್ಯೋತಿಸರ್ ನಲ್ಲಿ ಪಾಂಚಜನ್ಯ ಸ್ಮಾರಕವನ್ನು ಲೋಕಾರ್ಪಣೆ ಮಾಡಲಾಯಿತು ಎಂದು ತಿಳಿಸಿದರು. ಭಾರತ ವಿಮಾನ ನಿರ್ವಹಣೆ, ದುರಸ್ತಿ ಮತ್ತು ಕೂಲಂಕಷ ಪರೀಕ್ಷೆಯಲ್ಲಿ ಪ್ರಮುಖ ಹೆಜ್ಜೆಯನ್ನು ಇರಿಸಿದ್ದು, ಈ ನಿಟ್ಟಿನಲ್ಲಿ ಹೈದರಾಬಾದ್‌ನಲ್ಲಿ ವಿಶ್ವದ ಅತಿದೊಡ್ಡ ಲೀಪ್ ಎಂಜಿನ್ ಎಮ್.ಆರ್.ಒ ಸೌಲಭ್ಯವನ್ನು ಉದ್ಘಾಟಿಸಲಾಗಿದೆ ಎಂದು ಹೇಳಿದರು. ಕಳೆದ ವಾರವಷ್ಟೇ, ಸ್ಕೈರೂಟ್‌ನ ಇನ್ಫಿನಿಟಿ ಕ್ಯಾಂಪಸ್, ಭಾರತದ ಬಾಹ್ಯಾಕಾಶ ಪರಿಸರ ವ್ಯವಸ್ಥೆಗೆ ಹೊಸ ಚೈತನ್ಯ ತುಂಬಿದ್ದು, ಭಾರತದ ಹೊಸ ಚಿಂತನೆ, ನಾವೀನ್ಯತೆ ಮತ್ತು ಯುವ ಶಕ್ತಿಗೆ ಇದು ಪ್ರತಿಬಿಂಬವಾಗಿದೆ ಎಂದು ಪ್ರಧಾನಿ ಹೇಳಿದರು. ಚಂದ್ರಯಾನ-೨ ಸಂಪರ್ಕ ಕಡಿತಗೊಂಡ ದಿನ ಇಡೀ ದೇಶ, ವಿಶೇಷವಾಗಿ ವಿಜ್ಞಾನಿಗಳು, ನಿರಾಶೆಗೊಂಡಿದ್ದರು. ಆದರೆ, ವೈಫಲ್ಯ ಅವರನ್ನು ತಡೆಯಲಿಲ್ಲ. ಆ ದಿನವೇ ಚಂದ್ರಯಾನ-೩ ರ ಯಶೋಗಾಥೆಯನ್ನು ಬರೆಯಲಾಯಿತು. ಇದು ವೈಫಲ್ಯವನ್ನು ಜಯಿಸಿದ ಆತ್ಮವಿಶ್ವಾಸದ ಯಶಸ್ಸಾಗಿತ್ತು ಎಂದು ಹೆಮ್ಮೆ ವ್ಯಕ್ತಪಡಿಸಿದರು. ಜೇನುತುಪ್ಪದ ಉತ್ಪಾದನೆಯ ಹಿಂದೆ ಇರುವ ಕಠಿಣ ಪರಿಶ್ರಮ, ಪರಂಪರೆ ಮತ್ತು ಪ್ರಕೃತಿಯೊಂದಿಗೆ

ಅದು ಹೊಂದಿರುವ ಸುಂದರ ಸಾಮರಸ್ಯದ ಕುರಿತು ವಿವರಿಸಿದ ಪ್ರಧಾನಿ, ಜಮ್ಮು - ಕಾಶ್ಮೀರದ ಗುಡ್ಡಗಾಡು ಪ್ರದೇಶಗಳಲ್ಲಿ, ಜೇನುನೊಣಗಳು ಕಾಡು ತುಳಸಿಯಿಂದ ವಿಶಿಷ್ಟವಾದ ಜೇನುತುಪ್ಪವನ್ನು ಉತ್ಪಾದಿಸುತ್ತವೆ. ಈ ಬಿಳಿ ಬಣ್ಣದ ಜೇನುತುಪ್ಪವನ್ನು ರಾಂಬನ್ ಸುಲಾಯಿ ಜೇನುತುಪ್ಪ ಎಂದು ಕರೆಯಲಾಗುತ್ತದೆ. ಈ ಜೇನುತುಪ್ಪಕ್ಕೆ ಕೆಲವು ವರ್ಷಗಳ ಹಿಂದೆ ಜಿಐ ಟ್ಯಾಗ್ ದೊರೆಯಿತು. ಅಂದಿನಿಂದ, ಈ ಜೇನುತುಪ್ಪವು ದೇಶಾದ್ಯಂತ ಮನ್ನಣೆಯನ್ನು ಗಳಿಸಿದೆ. ಅದೇ ರೀತಿ, ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿನ ಸಸ್ಯವರ್ಗವು ಜೇನು ಉತ್ಪಾದನೆಗೆ ಉತ್ಕೃಷ್ಟ ಎಂದು ಪರಿಗಣಿಸಲಾಗುತ್ತದೆ. ಇಲ್ಲಿ, 'ಗ್ರಾಮಜನ್ಯ' ಎಂಬ ರೈತ ಸಂಘಟನೆಯು, ಈ ನೈಸರ್ಗಿಕ ಉಡುಗೊರೆಗೆ ಹೊಸ ಆಯಾಮವನ್ನು ನೀಡುತ್ತಿದೆ. 'ಗ್ರಾಮಜನ್ಯ' ಆಧುನಿಕ ಸಂಸ್ಕರಣಾ ಘಟಕವನ್ನು ನಿರ್ಮಿಸಿದೆ ಮತ್ತು ಪ್ರಯೋಗಾಲಯ, ಬಾಟಲ್, ಸಂಗ್ರಹಣೆ ಮತ್ತು ಡಿಜಿಟಲ್ ಟ್ರ್ಯಾಕಿಂಗ್‌ನಂತಹ ಸೌಲಭ್ಯಗಳನ್ನು ಒದಗಿಸುತ್ತಿದೆ. ಈಗ, ಈ ಜೇನುತುಪ್ಪ ಬ್ರಾಂಡೆಡ್ ಉತ್ಪನ್ನವಾಗಿ ಹಳ್ಳಿಗಳಿಂದ ನಗರಗಳವರೆಗೆ ತಲುಪುತ್ತಿದೆ. ಎರಡೂವರೆ ಸಾವಿರಕ್ಕೂ ಹೆಚ್ಚು ರೈತರು ಈ ಪ್ರಯತ್ನದಿಂದ ಪ್ರಯೋಜನ ಪಡೆದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕರ್ನಾಟಕದ ತುಮಕೂರು ಜಿಲ್ಲೆಯ "ಶಿವಗಂಗಾ ಕಾಲಂಜಿಯಾ" ಎಂಬ ಸಂಸ್ಥೆಯ ಪ್ರಯತ್ನಗಳು ಸಹ ಶ್ಲಾಘನೀಯ. ಪ್ರತಿಯೊಬ್ಬ ಸದಸ್ಯರಿಗೂ ಆರಂಭದಲ್ಲಿ ಎರಡು ಜೇನು ಪೆಟ್ಟಿಗೆಗಳನ್ನು ಇಲ್ಲಿ ನೀಡಲಾಗುತ್ತದೆ. ಹೀಗೆ, ಸಂಸ್ಥೆಯು, ಅನೇಕ ರೈತರನ್ನು ತನ್ನ ಅಭಿಯಾನದಲ್ಲಿ ಸೇರ್ಪಡೆಗೊಳಿಸಿಕೊಂಡಿದೆ. ಈಗ, ಈ ಸಂಸ್ಥೆಯೊಂದಿಗೆ ಕೈಜೋಡಿಸಿದ ರೈತರು ಜಂಟಿಯಾಗಿ ಜೇನುತುಪ್ಪವನ್ನು ಹೊರತೆಗೆದು, ಅದನ್ನು ಸುಂದರವಾಗಿ ಪ್ಯಾಕ್ ಮಾಡಿ ಸ್ಥಳೀಯ ಮಾರುಕಟ್ಟೆಗೆ ತಲುಪಿಸುತ್ತಾರೆ. ಇದರಿಂದ ಅವರಿಗೆ ಲಕ್ಷಾಂತರ ರೂಪಾಯಿಗಳ ಆದಾಯ ಬರುತ್ತಿದೆ ಎಂದು ತಿಳಿಸಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ

ಮುಂಬರುವ ದಿನಗಳಲ್ಲಿ ಕ್ರಿಸ್ಮಸ್ ಮತ್ತು ಹೊಸ ವರ್ಷಕ್ಕಾಗಿ ಖರೀದಿ ವೇಳೆಯು, 'ವೋಕಲ್ ಫಾರ್ ಲೋಕಲ್' ಮಂತ್ರವನ್ನು ನೆನಪಿಟ್ಟುಕೊಳ್ಳಿ, ನಮ್ಮ ದೇಶದಲ್ಲೇ ತಯಾರಾದ ವಸ್ತುಗಳನ್ನೇ ಖರೀದಿಸಿ, ನಮ್ಮ ದೇಶವಾಸಿಯ ಶ್ರಮದಿಂದ ತಯಾರಾದ ವಸ್ತುಗಳನ್ನೇ ಮಾರಾಟ ಮಾಡಿ ಎಂದು ಕರೆ ನೀಡಿದರು.

***************

ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೂ ಮುನ್ನ ಕೇಂದ್ರ ಸರ್ಕಾರ ಕರೆದಿರುವ ಸರ್ವಪಕ್ಷ ಸಭೆ ಆರಂಭಗೊಂಡಿದೆ. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ. ರಾಜ್ಯಸಭೆಯ ಸದನದ ನಾಯಕ ಜೆ.ಪಿ.ನಡ್ಡಾ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರುಗಳಾದ ಅರ್ಜುನ್ ರಾಮ್ ಮೇಘವಾಲ್ ಮತ್ತು ಡಾ.ಎಲ್.ಮುರುಗನ್ ಕೂಡ ಹಾಜರಿದ್ದರು. ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್, ಡಿಎಂಕೆ ನಾಯಕ ತಿರುಚಿ ಶಿವ, ಟಿಎಂಸಿ ನಾಯಕ ಡೆರೆಕ್ ಒ ಬ್ರಿಯಾನ್, ಶಿವಸೇನಾ ನಾಯಕ ನರೇಶ್ ಮಸ್ಕೆ ಸೇರಿದಂತೆ ಇತರರು ಸಭೆಯಲ್ಲಿ ಭಾಗವಹಿಸಿದ್ದಾರೆ. ಸಂಸತ್ತಿನ ಚಳಿಗಾಲದ ಅಧಿವೇಶನ ನಾಳೆಯಿಂದ ಪ್ರಾರಂಭವಾಗಲಿದ್ದು, ಡಿಸೆಂಬರ್ ೧೯ ರವರೆಗೆ ಮುಂದುವರಿಯಲಿದೆ.

***************

ಜಮ್ಮುವಿನ ಅಂತರರಾಷ್ಟ್ರೀಯ ಗಡಿಯಲ್ಲಿ ಮಂಜು ದಟ್ಟಣೆಯಿಂದ ಗೋಚರತೆ ಕಡಿಮೆಯಾಗುವ ಹಿನ್ನೆಲೆ ಗಡಿ ಭದ್ರತಾ ಪಡೆ-ಬಿಎಸ್‌ಎಫ್ ಗಡಿ ಪ್ರದೇಶಾದ್ಯಂತ ಕಣ್ಗಾವಲನ್ನು ಹೆಚ್ಚಿಸಿದೆ. ಚಳಿಗಾಲದ ಪರಿಸ್ಥಿತಿಯಲ್ಲಿ ಗಸ್ತು ತಿರುಗುವಿಕೆ ಹೆಚ್ಚು ಸವಾಲಿನಿಂದ ಕೂಡಿದ್ದು, ಮಹಿಳಾ ಸೈನಿಕರು ಸೇರಿದಂತೆ ಬಿಎಸ್‌ಎಫ್ ಸಿಬ್ಬಂದಿ ಯಾವುದೇ ಸಂಭಾವ್ಯ ಒಳನುಸುಳುವಿಕೆ ಪ್ರಯತ್ನಗಳನ್ನು ಎದುರಿಸಲು ದಿನದ ೨೪ ಗಂಟೆಯೂ ಮೇಲ್ವಿಚಾರಣೆ ಹೆಚ್ಚಿಸಿದೆ. ದಿನವಿಡೀ ಗೋಚರತೆ ಬದಲಾಗುವುದರಿಂದ ಹೆಚ್ಚುವರಿ ಕಣ್ಗಾವಲು ಸಾಧನಗಳು ಮತ್ತು ಗಸ್ತು ತಿರುಗುವಿಕೆಯನ್ನು ನಡೆಸಲಾಗುತ್ತಿದೆ. ಕಠಿಣ ಹವಾಮಾನದ ಹೊರತಾಗಿಯೂ, ಬಿಎಸ್‌ಎಫ್ ಸಿಬ್ಬಂದಿ ಸಂಪೂರ್ಣವಾಗಿ ಜಾಗರೂಕರಾಗಿರುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

***************

ಬಂಗಾಳಕೊಲ್ಲಿಯ ನೈಋತ್ಯ ಮತ್ತು ತಮಿಳುನಾಡು-ಪುದುಚೇರಿ ಕರಾವಳಿಗೆ ಹೊಂದಿಕೊಂಡಿರುವ ದಿತ್ವಾ ಚಂಡಮಾರುತವು, ಕಳೆದ ೬ ಗಂಟೆಗಳಲ್ಲಿ ಗಂಟೆಗೆ ೧೨ ಕಿಲೋಮೀಟರ್ ವೇಗದಲ್ಲಿ ಉತ್ತರದ ಕಡೆಗೆ ಚಲಿಸಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಇತ್ತೀಚಿನ ವರದಿಯ ಪ್ರಕಾರ, ಇದು ಬೆಳಿಗ್ಗೆ ೮.೩೦ ಕ್ಕೆ ಕಡಲೂರಿನಿಂದ ಸುಮಾರು ೧೦೦ ಕಿಲೋಮೀಟರ್ ಪೂರ್ವ-ಆಗ್ನೇಯ, ಕಾರೈಕಲ್‌ನಿಂದ ೧೦೦ ಕಿಲೋಮೀಟರ್ ಪೂರ್ವ-ಈಶಾನ್ಯ, ಪುದುಚೇರಿಯ ಆಗ್ನೇಯಕ್ಕೆ ೧೧೦ ಕಿಲೋಮೀಟರ್, ವೇದರಣ್ಯದಿಂದ ೧೪೦ ಕಿಲೋಮೀಟರ್ ಈಶಾನ್ಯ ಮತ್ತು ಚೆನ್ನೈನಿಂದ ೧೮೦ ಕಿಲೋಮೀಟರ್ ಆಗ್ನೇಯದಲ್ಲಿ ಕೇಂದ್ರೀಕೃತವಾಗಿದೆ. ಮುಂದಿನ ೨೪ ಗಂಟೆಗಳಲ್ಲಿ ಇದು ಉತ್ತರ ತಮಿಳುನಾಡು-ಪುದುಚೇರಿ ಕರಾವಳಿಗೆ ಸಮಾನಾಂತರವಾಗಿ ಉತ್ತರಕ್ಕೆ ಚಲಿಸುವ ಸಾಧ್ಯತೆಯಿದೆ. ಉತ್ತರಕ್ಕೆ ಚಲಿಸುವಾಗ ಚಂಡಮಾರುತವು, ಮಧ್ಯಾಹ್ನದ ವೇಳೆಗೆ ಕನಿಷ್ಠ ೬೦ ಕಿಲೋಮೀಟರ್ ಮತ್ತು ತಮಿಳುನಾಡು-ಪುದುಚೇರಿ ಕರಾವಳಿಯಿಂದ ಸಂಜೆ ೩೦ ಕಿಲೋಮೀಟರ್ ದೂರದಲ್ಲಿ ನೈಋತ್ಯ ಬಂಗಾಳಕೊಲ್ಲಿಯ ಮೇಲೆ ಕೇಂದ್ರೀಕೃತವಾಗಿರುತ್ತದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

***************

ಥೈಲ್ಯಾಂಡ್‌ವಿದೇಶಾಂಗ ಸಚಿವ ಸಿಹಾಸಕ್ ಫುವಾಂಗ್ಕೆಟ್ಕಿಯೋವ್ -ನಾಲ್ಕು ದಿನಗಳಭಾರತ ಭೇಟಿಗಾಗಿ ದೆಹಲಿಗೆ ಆಗಮಿಸಿದ್ದಾರೆ. ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್‌ಜೈಸ್ವಾಲ್ ಅವರು ನಿನ್ನೆ ರಾತ್ರಿ ಅವರನ್ನು ಸ್ವಾಗತಿಸಿದರು, ಈ ಭೇಟಿ ಕಾರ್ಯತಂತ್ರದ ಪಾಲುದಾರಿಕೆ ಮತ್ತುಶಾಶ್ವತ ನಾಗರಿಕ ಸಂಬಂಧಗಳನ್ನು ಬಲಪಡಿಸಲಿದೆ ಎಂದು ಅವರು ಹೇಳಿದ್ದಾರೆ.

***************

ರಾಂಚಿಯ ಜೆಎಸ್‌ಸಿಎ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಇಂದು ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಸರಣಿಯ ಮೊದಲ ಏಕದಿನ ಕ್ರಿಕೆಟ್ ಪಂದ್ಯ ನಡೆಯಲಿದೆ. ಪಂದ್ಯ ಮಧ್ಯಾಹ್ನ ೧.೩೦ ಕ್ಕೆ ಆರಂಭವಾಗಲಿದೆ. ಕೆ.ಎಲ್.ರಾಹುಲ್ ನಾಯಕತ್ವದಲ್ಲಿ ನಡೆಯಲಿರುವ ಪಂದ್ಯದಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಯಶಸ್ವಿ ಜೈಸ್ವಾಲ್, ರಿಷಬ್ ಪಂತ್, ವಾಷಿಂಗ್ಟನ್ ಸುಂದರ್, ಹರ್ಷದೀಪ್ ಸಿಂಗ್, ಸೇರಿದಂತೆ ಪ್ರಮುಖ ಆಟಗಾರರು ಕಣಕ್ಕಿಳಿಯಲಿದ್ದಾರೆ.

***************